# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 14(44)

ಸದಸ್ಯರ ಹೆಸರು : ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 11-08-2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ಕೊರತೆಯಿರುವ ಉಪನ್ಯಾಸಕರಿಗೆ ಕಾರ್ಯಭಾರ ಸರಿಪಡಿಸಲು ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ:27-09-2018ರ ಪ್ರಕಾರ ಹಾಗೂ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) (ಶೈಕ್ಷಣಿಕ, ನೊಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರೆ) ನಿಯಮಗಳು 2024ರ Schedule-iv ರಂತೆ ಪ್ರಾಂಶುಪಾಲರು ಮತ್ತು ಉಪನ್ಯಾಸಕರಿಗೆ ಒಂದು ವಾರಕ್ಕೆ ಪ್ರಾಯೋಗಿಕ ವಿಷಯಕ್ಕೆ 24 ಗಂಟೆಗಳು ಹಾಗೂ ಪ್ರಾಯೋಗಿಕವಲ್ಲದ ವಿಷಯಗಳಿಗೆ 20 ಗಂಟೆಗಳು ಕಾರ್ಯಭಾರವನ್ನು ನಿಗಧಿಪಡಿಸಲಾಗಿದೆ. |
| ಆ) | ಸರ್ಕಾರವು ಸದನದಲ್ಲಿ ಭರವಸೆ ನೀಡಿರುವಂತೆ ಸರ್ಕಾರಿ ಆದೇಶ ಸಂಖ್ಯೆ: ಇಪಿ/09/ಟಿಪಿಯು/2024, ದಿನಾಂಕ:12-09-2024ರಲ್ಲಿ ಸೇವಾ ಭದ್ರತೆಯನ್ನು ನೀಡಲು ಆದೇಶದಲ್ಲಿ ತಿದ್ದುಪಡಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೇ; | ಕರ್ನಾಟಕ ಶಾಲಾ ಶಿಕ್ಷಣ ನಿಯಮ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೊಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 17 ರ ಪ್ರಕಾರ ಅನುದಾನಿತ ಉಪನ್ಯಾಸಕರಿಗೆ ನಿಯಮಾನುಸಾರ ಕಾರ್ಯಭಾರ ಇಲ್ಲದಿದ್ದ ಸಂದರ್ಭದಲ್ಲಿ 20 ಕಿ.ಮೀ ವ್ಯಾಪ್ತಿಯೊಳಗಿರುವ ಇನ್ನೊಂದು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಲು ಅವಕಾಶ ಇರುತ್ತದೆ. ಸದರಿ ಕಾರ್ಯವನ್ನು ಆಯಾ ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. (ಅನುಬಂಧ-ಎ ಲಗತ್ತಿಸಿದೆ)<br><br>ಒಂದು ವೇಳೆ ನಿಯಮದ ಪ್ರಕಾರ ಖಾಲಿ ಹುದ್ದೆ ಲಭ್ಯವಿಲ್ಲದಿದ್ದಾಗ, ಅಂತಹ ಉಪನ್ಯಾಸಕರನ್ನು ರಾಜ್ಯದಲ್ಲಿ ಇರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಸಂಬಂಧಿಸಿದ ಬೋಧನಾ ವಿಷಯದಲ್ಲಿ ನಿಗಧಿತ ಕಾರ್ಯಭಾರವನ್ನು ಹೊಂದಿರುವಂತಹ ಹುದ್ದೆಗೆದರು ವರ್ಗಾಯಿಸಲು 2024ರ ನಿಯಮ 29ರನ್ವಯ ಅವಕಾಶ ಕಲ್ಪಿಸಲಾಗಿದೆ. |
| ಇ) | ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ನಾನಾ ಕಾರಣಗಳಿಂದ ತೆರವಾದ ಹುದ್ದೆಗಳಿಗೆ ಸರ್ಕಾರದಿಂದ ತುಂಬಲು ಅವಕಾಶ ನೀಡುವ ತನಕ ಪಠ್ಯಬೋಧನೆಗೆ ಉಪನ್ಯಾಸಕರ ನೇಮಕಾತಿಗೆ ಯಾವ ಮಾನದಂಡವಿದೆ ಮತ್ತು ಯಾರು ಯಾವ ರೀತಿಯಲ್ಲಿ ನೇಮಕಗೊಳ್ಳುವರು; (ಸಂಪೂರ್ಣ ಮಾಹಿತಿ ನೀಡುವುದು) | • ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ ಆಯಾ ಕಾಲೇಜಿನ ಆಡಳಿತ ಮಂಡಳಿಯೇ ಆಗಿರುತ್ತದೆ.<br>• ಹೀಗಾಗಿ ಸರ್ಕಾರದಿಂದ ಖಾಲಿ ಇರುವ ಅನುದಾನಿತ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡಲು ಅವಕಾಶ ನೀಡುವವರೆಗೂ ಸಂಬಂಧಿಸಿದ ಕಾಲೇಜಿನ ಆಡಳಿತ ಮಂಡಳಿಗಳೇ ತಮ್ಮ ಸ್ವಂತ ಖರ್ಚಿನಿಂದ ಅನುದಾನರಹಿತವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಗೆ ಕ್ರಮವಹಿಸಬೇಕಾಗಿರುತ್ತದೆ.<br>• ಕರ್ನಾಟಕ ಶಾಲಾ ಶಿಕ್ಷಣ ನಿಯಮ (ಪದವಿ ಪೂರ್ವ) (ಶೈಕ್ಷಣಿಕ, ಆಡಳಿತ, ನೊಂದಣಿ ಹಾಗೂ ಸಹಾಯಾನುದಾನ ಇತ್ಯಾದಿ) 2024ರ ನಿಯಮ 17 ರ ಪ್ರಕಾರ ಅನುದಾನಿತ ಉಪನ್ಯಾಸಕರಿಗೆ ನಿಯಮಾನುಸಾರ ಕಾರ್ಯಭಾರ ಇಲ್ಲದಿದ್ದ ಸಂದರ್ಭದಲ್ಲಿ 20 ಕಿ.ಮೀಟರ್ ವ್ಯಾಪ್ತಿಯೊಳಗಿರುವ |

| | | |
|---|---|---|
| ಈ) | ಹೊಸ ಆದೇಶದಂತೆ ಕಾರ್ಯಭಾರ ಸರಿದೂಗಿಸಲು ಇನ್ನೊಂದು ಪದವಿ ಪೂರ್ವ ಕಾಲೇಜಿನ ಖಾಲಿ ಹುದ್ದೆಗೆ ನಿಯೋಜನೆ ಮಾಡಿದಾಗ ಈಗಾಗಲೇ ಆಡಳಿತ ಮಂಡಳಿಯಿಂದ ನೇಮಕವಾಗಿ ಕರ್ತವ್ಯ ನಿರ್ವಹಿಸಿರುವ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ; ಪೂರ್ಣಕಾಲಿಕವಾಗಿ ನೇಮಕ ಮಾಡಲು ಅವಕಾಶಗಳಿವೆಯೇ; ಈ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳಿವೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಇನ್ನೊಂದು ಅನುದಾನಿತ ಪದವಿ ಪೂರ್ವ ಕಾಲೇಜಿಗೆ ನಿಯೋಜಿಸಲು ಅವಕಾಶ ಇರುತ್ತದೆ. ಸದರಿ ಕಾರ್ಯವನ್ನು ಆಯಾ ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. (ಅನುಬಂಧ-ಎ ಲಗತ್ತಿಸಿದೆ)<br>• ಸದರಿ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರವು ಅನುಮತಿಸಿದ್ದಲ್ಲಿ, ಆಗ ಸದರಿ ಕಾಲೇಜಿನಲ್ಲಿ ಅನುದಾನರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು ಸಹ ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ.<br>• ಅನುದಾನಿತ ಬೋಧಕರಿಗೆ ಪೂರ್ಣ ಕಾರ್ಯಭಾರ ಇಲ್ಲದ್ದಿದಲ್ಲಿ ವೇತನ ಪಾವತಿಸಲು ಅಗತ್ಯ ಕಾರ್ಯಭಾರ ಹೊಂದಾಣಿಕೆ ಮಾಡಲು ಇಲಾಖೆ ಕ್ರಮವಹಿಸಬೇಕಾಗಿರುವುದರಿಂದ, ಕಾರ್ಯಭಾರ ಹೊಂದಾಣಿಕೆ ಸಲುವಾಗಿ ಅನುದಾನಿತ ಉಪನ್ಯಾಸಕರನ್ನು ಖಾಲಿ ಇರುವ ಅನುದಾನಿತ ಹುದ್ದೆಗೆ ನಿಯೋಜಿಸಬೇಕಾಗಿರುತ್ತದೆ, ಅಂತಹ ಅನುದಾನಿತ ಹುದ್ದೆಗಳಲ್ಲಿ ಈಗಾಗಲೇ ಅನುದಾನರಹಿತವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವಾದ ಆಡಳಿತ ಮಂಡಳಿಯ ಜವಬ್ದಾರಿಯಾಗಿರುತ್ತದೆ. |
| ಉ) | ಸರ್ಕಾರ ಹುದ್ದೆ ತುಂಬಲು ಅವಕಾಶ ನೀಡಿದಾಗ ಅವರನ್ನೇ ಅನುದಾನಕ್ಕೆ ಒಳಪಡಿಸಲು ಅವಕಾಶವಿದೆಯೇ; ಹೊಸ ನೇಮಕ ಮಾಡಿದ್ದಲ್ಲಿ ಈ ಉಪನ್ಯಾಸಕರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಅವಕಾಶವಿದೆಯೇ; 2024ರ ಆದೇಶದ ಪೂರ್ವದಲ್ಲಿ ಹುದ್ದೆಯನ್ನು ವೇತನಾನುದಾನಕ್ಕೆ ಒಳಪಡಿಸುವಾಗ ಕಾರ್ಯಭಾರ ಆಧಾರದಲ್ಲಿ ಅಥವಾ ಒಂದು ವಿಷಯಕ್ಕೆ ಒಂದು ಉಪನ್ಯಾಸಕರ ನೆಲೆಯಲ್ಲಿ ಅನುದಾನ ನೀಡಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | • ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ:27-09-2018ರಲ್ಲಿ ಪ್ರಾಯೋಗಿಕವಲ್ಲದ ವಿಷಯಗಳಿಗೆ 20 ಗಂಟೆ ಹಾಗೂ ಪ್ರಾಯೋಗಿಕ ವಿಷಯಗಳಿಗೆ 24 ಗಂಟೆಗಳ ಕಾರ್ಯಭಾರವನ್ನು ನಿಗಧಿಪಡಿಸಿರುತ್ತದೆ. ಅನುದಾನಕ್ಕೆ ಒಳಪಡಿಸುವಾಗ ಕಾರ್ಯಭಾರವನ್ನು ಪರಿಗಣಿಸಲಾಗುತ್ತದೆ, ಹೊರತಾಗಿ ಒಂದು ವಿಷಯಕ್ಕೆ ಒಂದು ಉಪನ್ಯಾಸಕರ ನೆಲೆಯಲ್ಲಿ ಅನುದಾನವನ್ನು ನೀಡಲು ಅವಕಾಶ ಇರುವುದಿಲ್ಲ. (ಅನುಬಂಧ-ಬಿ ಲಗತ್ತಿಸಿದೆ) |

**ಸಂಖ್ಯೆ**: ಇಪಿ 264 ಡಿಜಿಡಬ್ಲೂ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು